(MR. SPEAKER.)
they would do it, even if it is a little costly.

ಶ್ರೀ ಡಿ. ಆರ್. ಕರಿಗೌಡ.—ಈಗ ಈ ಖಾದಿ ತಯಾರಿಸುತ್ತಿರುವುದು ಸರಿಯಾಗಿ ಖರ್ಚಾಗುತ್ತಿಲ್ಲ. ಈ ಕ್ಯೆಗಾರಿಕೆಯನ್ನೇ ನಿಲ್ಲಿಸಬೇಕು ಎಂದು ಆಲೋಚನೆ ಮಾಡುತ್ತಿರುವಾಗ ತಾವು ಸರ್ಕಾರಿ ನೌಕರರು ಗಳಿಗೆಲ್ಲಾ ಖಾದಿಯನ್ನೇ ಕೊಳ್ಳಬೇಕೆಂದೂ, ಖಾದಿಯನ್ನೇ ಧರಿಸಬೇಕೆಂದೂ ಏಕೆ ನಿರ್ಬಂಧ ಮಾಡಬಾರದು ?

ಶ್ರೀ ಕೆ. ಹನುಮಂತಯ್ಯ.—ಅದಷ್ಟುಮಟ್ಟಿಗೂ ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲೆಲ್ಲಾ ಈಗ ಖಾದಿಯನ್ನೇ ಉಪಯೋಗಕ್ಕೆ ತರುತ್ತಿದ್ದೇವೆ. ಆದರೆ ಎಲ್ಲರೂ ಖಾದಿಯನ್ನು ಕೊಂಡೇ ತೀರಬೇಕು ಎಂದು ನಿರ್ಬಂಧ ಮಾಡುವುದು ಬಹಳ ಕಷ್ಟವಾದ ಕೆಲಸ ಮತ್ತು ಖಾದೀ ಧಾರಣೆಯ ತತ್ವಕ್ಕೇ ವಿರುದ್ಧ.

ಶ್ರೀ ಡಿ. ಆರ್. ಕರಿಗೌಡ.—ನಾನು ಕೇಳುತ್ತಿರುವುದು ನಿಮ್ಮ ಆಡಳಿತದಲ್ಲಿರತಕ್ಕಂಥ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆ, ಈ ಸೆಕ್ರೆಟೇರಿಯಟ್, ಆಸ್ಪತ್ರೆ ಮುಂತಾದ ಇಲಾಖೆಗಳಲ್ಲಾದರೂ ತಾವೇಕೆ ಈ ಖಾದಿ ಬಟ್ಟೆಯನ್ನೇ ಸರಬರಾಯಿ ಮಾಡಬಾರದು?

ಶ್ರೀ ಕೆ. ಹನುಮಂತಯ್ಯ.—ಈಗಾಗಲೇ ಸರ್ಕಾರಿ ಜವಾನರುಗಳಿಗೆಲ್ಲಾ ಖಾದಿ ಬಟ್ಟೆಯನ್ನೇ ಒದ ಒದಗಿಸುತ್ತಿದ್ದೇವೆ. ಅಲ್ಲದೆ ಗೆಸ್ಟ್ ಹೌಸ್‌ಗಳಲ್ಲಿ ಬೇಕಾಗತಕ್ಕಂಥ ಕರ್ಟನ್ಸ್, ಬೆಡ್‌ಷೀಟ್ಸ್ ಮುಂತಾದವಕ್ಕೆಲ್ಲಾ ಈಗ ಖಾದಿಯನ್ನೇ ಉಪಯೋಗಿಸಲಾಗುತ್ತಿದೆ. ಆದರೆ ಖಾದಿಯನ್ನೇ ಎಲ್ಲಾ ನೌಕರುಗಳಿಗೂ ಒಂದು ಯೂನಿಫಾರಂ ಆಗಿ ಮಾಡಬೇಕೆಂದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಟಿ. ಹನುಮಯ್ಯ.—ಈಗ ತಾವು ಖಾದಿಯನ್ನು ತಯಾರಿಸತಕ್ಕ ಬಗ್ಗೆ ಯಾವುದಾದರೂ ಹೊಸ ಯೋಜನೆಗಳನ್ನು ಕಂಡುಹಿಡಿದಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ನಮ್ಮಕ್ಕೆ ಈಗ ಇರತಕ್ಕ ಕೇಂದ್ರಗಳಲ್ಲಿ ತಯಾರಾಗತಕ್ಕಂಥ ಖಾದಿಯೆಲ್ಲಾ ಖರ್ಚಾದರೆ, ಇದಕ್ಕೆ ಸರಿಯಾಗಿ ಗಿರಾಕಿ ಬಂದರೆ ಅಷ್ಟೇ ಸಾಕು, ಅದೇ ನನಗೊಂದು ದೊಡ್ಡ ಸಂತೋಷ.

ಶ್ರೀ ಟಿ. ಹನುಮಯ್ಯ.—ಆದರೆ ತಾವೀಗ ಖಾದಿ ಧರಿಸುವುದನ್ನು ಕೇವಲ ಸಣ್ಣ ಪುಟ್ಟ ನೌಕರರಿಗೆ ಮಾತ್ರ ನಿರ್ಬಂಧ ಮಾಡುತ್ತಿದ್ದೀರಿ. ಆದರೆ ಇದೇ ರೀತಿ ಸಾವಿರ ರೂಪಾಯಿಗಳ ಸಂಬಳ ತೆಗೆದು ಕೊಳ್ಳುವ ಅಧಿಕಾರಿಗಳಿಗೇಕೆ ತಾವು ನಿರ್ಬಂಧ ಮಾಡಬಾರದು ?

ಶ್ರೀ ಎಚ್. ಸಿದ್ದವೀರಪ್ಪ.—ಅವರಿಗೂ ಸಹ ಈಗ ಖಾದಿ ಹುಂಡಿಗಳನ್ನು ಮಾರಾಟ ಮಾಡಿದ್ದೇವೆ.

ಶ್ರೀ ಟಿ. ಹನುಮಯ್ಯ.—ನಾನು ಹೇಳುತ್ತಿರುವುದು ಹೀಗೆ ಎಲ್ಲೋ ವರ್ಷದಲ್ಲಿ ಒಂದು ಸಾರ್ತಿ ಖಾದಿ ಕೊಂಡುಕೊಳ್ಳುವಹಾಗೆ ಮಾಡಬೇಕೆಂಬುದಲ್ಲ. ಅವರೂ ಕೂಡ ಎಲ್ಲಾ ಕಾಲದಲ್ಲೂ ಈ ಖಾದಿಯನ್ನೇ ಧರಿಸಬೇಕೆಂದು ಅವರಿಗೆ ತಾವೇಕೆ ಒತ್ತಾಯಪಡಿಸಬಾರದು ?

ಅಧ್ಯಕ್ಷರು.—ಅವರಾಗಿಯೇ ಅಪೇಕ್ಷೆಪಟ್ಟರೆ ಸರಬರಾಯಿ ಮಾಡುತ್ತಾರೆ. ಹಾಗಿಲ್ಲದೆ ಅವರನ್ನು ಬಲಾತ್ಕಾರಪಡಿಸುವುದಕ್ಕೆ ಹೇಗೆ ಸಾಧ್ಯವಾಗುತ್ತದೆ ?

Iron and Steel Works, Bhadravati (Contract to supply Railway Sleepers.)

Q.—332. **Sri R. ANANTARAMAN** (Chamarajpet).—

Will the Government be pleased to state :—

(*a*) whether the Iron and Steel Works, Bhadravati have entered into a contract to supply railway sleepers to the Railway Department ;

(*b*) whether the Government are prepared to place the agreement on the floor of the House ;

(*c*) the rate at which it is sold to the Railways ;

(*d*) the rate of production of the sleepers ?

A.—**Sri H. SIDDAVEERAPPA** (Minister for Home and Industries).—

(*a*) Yes.

(*b*) There is no formal agreement.

(*c*) and (*d*) Not yet finalised. Still under discussion and negotiation.

Sri R. ANANTARAMAN.—I have no supplementaries.

Grants and Loan from Central Government.

Q.—192. **Sri V. M. MASCARENHAS** (St. John's Hill).—

Will the Government be pleased to state :—

(*a*) the amounts received from the Central Government either as grants or as loans during the period 1st April 1954 to 1st January 1955 ;

(*b*) the specific purpose for which the amounts were received ;

(*c*) whether amounts have already been utilised ; if not whether they would be spent before 31st March 1955 ?